**ಕರ್ನಾಟಕ ಸರ್ಕಾರ**

**ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ**

ಸಂಖ್ಯೆ: ಸಚುಆ/199/ಬೆಂ.ವಿ/2013-14

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ(ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು-560004 ದಿನಾಂಕ:19.11.2013

**ಗೆ,**

**ವ್ಯವಸ್ಥಾಪಕ ನಿರ್ದೇಶಕರು,**
**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ**
**ಸಹಕಾರ ಸಂಘ ನಿ.,**
**ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ,**
**1ನೇ ಬ್ಲಾಕ್, ರಾಜಾಜಿನಗರ,**
**ಬೆಂಗಳೂರು-560 010.**

ಮಾನ್ಯರೇ,

**ವಿಷಯ:-** ರಾಜ್ಯದಲ್ಲಿ ಚುನಾವಣೆ ಬಾಕಿ ಇರುವ ಸೌಹಾರ್ದ ಸಹಕಾರಿಗಳಿಗೆ ಚುನಾವಣೆ ನಡೆಸುವ ಬಗ್ಗೆ.

**ಉಲ್ಲೇಖ:-** ತಮ್ಮ ಪತ್ರ ಕ್ರ.ಸಂ:ಸಂಸ/ಸಚುಆ/7/2013-14/1131 ದಿನಾಂಕ:11.09.2013

*****

ರಾಜ್ಯದಲ್ಲಿ ಚುನಾವಣೆ ಬಾಕಿ ಇರುವ 9 ಸೌಹಾರ್ದ ಸಹಕಾರಿಗಳಿಗೆ ಚುನಾವಣೆ ಪ್ರಕ್ರಿಯೆ ನಡೆಸಿಕೊಡಲು ತಾವು ಕೋರಿರುತ್ತೀರಿ. ಹಾಗೂ ಹಾವೇರಿ ಜಿಲ್ಲೆ ಶಿಗ್ಗಾಂವ್ ತಾಲ್ಲೂಕಿನ ಹಸಿರು ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಶಿಗ್ಗಾಂವ್ ಇದರ ಬಗ್ಗೆ ಉಚ್ಚ ನ್ಯಾಯಾಲಯದಲ್ಲಿನ ಆದೇಶದಂತೆ ಚುನಾವಣೆಗೆ ಚುನಾವಣಾಧಿಕಾರಿಗಳನ್ನು ನೇಮಿಸುವ ಬಗ್ಗೆ ನೀಡಿರುವ ತೀರ್ಪಿನ ಬಗ್ಗೆ ಪ್ರಸ್ತಾಪಿಸಿರುತ್ತೀರಿ,ಈ ಸಂಬಂಧ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರಿಂದ ವರದಿಯನ್ನು ಕೇಳಲಾಗಿದೆ.ಉಳಿದಂತೆ ಇತರೆ ಸೌಹಾರ್ದ ಸಂಯುಕ್ತ ಸಹಕಾರಿ ಸಂಘಗಳ ಹಾಲಿ ಪರಿಸ್ಥಿತಿಯ ಕುರಿತು ಅಂದರೆ ಮಂಡಳಿ ಅವಧಿ ಗತಿಸಿದ ವಿವರಗಳನ್ನು ಸಂಘವಾರು ಪ್ರತ್ಯೇಕ ವಿವರವನ್ನು ಸಂಬಂಧಪಟ್ಟ ಉಪನಿಬಂಧಕರ ಮುಖಾಂತರ ಸಲ್ಲಿಸಲು ತಮಗೆ ತಿಳಿಸುವಂತೆ ನಿರ್ದೇಶಿತನಾಗಿರುತ್ತೇನೆ.

**ತಮ್ಮ ವಿಶ್ವಾಸಿ,**

**(ಬಿ.ಹೆಚ್. ಮಂಜಪ್ಪ)**
**ಕಾರ್ಯದರ್ಶಿ**

**ಪ್ರತಿಯನ್ನು ಕೆಳಕಂಡವರಿಗೆ ಅಗತ್ಯ ಪರಿಶೀಲನಾ ವರದಿಯನ್ನು ಆಯೋಗಕ್ಕೆ ಕೂಡಲೇ ಸಲ್ಲಿಸಲು ತಿಳಿಸಲಾಗಿದೆ, ಚುನಾವಣೆ ಬಾಕಿಯಿರುವ ಸೌಹಾರ್ದ ಸಹಕಾರಿಗಳ ಪಟ್ಟಿ ಮಾಹಿತಿಗಾಗಿ ಲಗತ್ತಿಸಿದೆ.**

1. ಉಪನಿಬಂಧಕರು, ಬೆಳಗಾಂ ಜಿಲ್ಲೆ, ಬೆಳಗಾಂ
2. ಉಪನಿಬಂಧಕರು, ಕೇಂದ್ರ ವಲಯ, ಮಲ್ಲೇಶ್ವರಂ, ಬೆಂಗಳೂರು
3. ಉಪನಿಬಂಧಕರು, ಉತ್ತರ ವಲಯ, ಮಲ್ಲೇಶ್ವರಂ, ಬೆಂಗಳೂರು
4. ಉಪನಿಬಂಧಕರು, ದಕ್ಷಿಣ ವಲಯ, ಚಾಮರಾಜಪೇಟೆ, ಬೆಂಗಳೂರು
5. ಉಪನಿಬಂಧಕರು,ಹಾವೇರಿ ಜಿಲ್ಲೆ, ಹಾವೇರಿ
6. ಉಪನಿಬಂಧಕರು, ಉಡುಪಿ ಜಿಲ್ಲೆ, ಉಡುಪಿ